ಶ್ರೀವಿಜಯದಾಸರ ವಿರಚಿತ

ಶ್ರೀಮಧ್ವಾಂತರ್ಗತ - ಶ್ರೀದುರ್ಗಾ ಸುಳಾದಿ

ಧ್ರುವತಾಳ

ದುರ್ಗಾ ದುರ್ಗಿಯೆ, ಮಹಾದುಷ್ಟಜನಸಂಹಾರಿ
ದುರ್ಗಾಂತರ್ಗತ ದುರ್ಗೆ, ದುರ್ಲಭೆ ಸುಲಭೆ.
ದುರ್ಗಮವಾಗಿದೆ ನಿನ್ನ ಮಹಿಮೆ, ಬೊಮ್ಮ
ಭರ್ಗಾದಿಗಳಿಗೆಲ್ಲ ಗುಣಿಸಿದರು.
ಸ್ವರ್ಗಭೂಮಿಪಾತಾಳ ಸಮಸ್ತ ವ್ಯಾಪ್ತದೇವಿ.
ವರ್ಗಕ್ಕೆ ಮೀರಿದ ಬಲು ಸುಂದರಿ.
ದುರ್ಗುಣ ದೇವರ ಬಾಧೆ ಬಹಳವಾಗಿದೆ ತಾಯೆ !
ದುರ್ಗತಿಹಾರಿ, ನಾನು ಪೇಳುವದೇನು ?
ದುರ್ಗಂಧವಾಗಿದೆ ಸಂಸ್ಕೃತಿ ನೋಡಿದರೆ.
ನಿರ್ಗಮ ನಾ ಕಾಣೆನಮ್ಮ, ಮಂಗಳಾಂಗಿ !
ದುರ್ಗೆ, ಹೇ ದುರ್ಗೆ, ಮಹಾದುರ್ಗೆ, ಭೂದುರ್ಗೆ, ವಿಷ್ಣು
ದುರ್ಗೆ, ದುರ್ಜಯೆ ದುರ್ಧರ್ಷೆ ಶಕ್ತೆ
ದುರ್ಗ ಕಾನನ ಗಹನ ಪರ್ವತ ಘೋರಸರ್ಪ
ಗರ್ಗರಶಬ್ದ ವ್ಯಾಘ್ರ ಕರಡಿ ಮೃತ್ಯು-
ವರ್ಗ ಭೂತಪ್ರೇತಪಿಶಾಚ ಮೊದಲಾದ
ದುರ್ಗಣ ಸಂಕಟ ಪ್ರಾಪ್ತವಾಗೆ
ದುರ್ಗಾ ದುರ್ಗೆ ಎಂದು ಉಚ್ಚಸ್ವರದಿಂದ
ನಿರ್ಗಳಿತವಾಗಿ ಒಮ್ಮೆ ಕೂಗಿದರೂ,
ಸ್ವರ್ಗಾಪವರ್ಗದಲ್ಲಿ ಹರಿಯೊಡನೆ ಇದ್ದರು,
ಸುರ್ಗಣ ಜಯ ಜಯವೆಂದು ಪೊಗಳುತಿರೆ
ಕರ್ಗಳಿಂದಲಿ ಎತ್ತಿ ಸಾಕುವ ಸಾಕ್ಷಿಭೂತೆ!
ನೀರ್ಗುಡಿದಂತೆ ಲೋಕಲೀಲೆ ನಿನಗೆ.
ಸ್ವರ್ಗಂಗಾಜನಕ ನಮ್ಮ ವಿಜಯವಿಠಲನಂಘ್ರಿ
ದುರ್ಗಾಶ್ರಯ ಮಾಡಿ ಬದುಕುವಂತೆ ಮಾಡು ॥ 1 ॥
ಅರಿದರಾಂಕುಶ ಶಕ್ತಿ ಪರಶು ನೇಗಿಲು ಖಡ್ಗ
ಸರಸಿಜಗದಾ ಮುದ್ಗರ ಚಾಪ ಮಾರ್ಗಣ
ವರ ಅಭಯ ಮುಸಲ ಪರಿಪರಿ ಆಯುಧವ
ಧರಿಸಿ ಮೆರೆವ ಲಕುಮಿ !ಸರಸಿಜಭವ ರುದ್ರ
ಸರುವ ದೇವತೆಗಳ ಕರುಣಾಪಾಂಗದಲಿ ನಿರೀಕ್ಷಿಸಿ ಅ-
ವರವರ ಸ್ವರೂಪಸುಖ ಕೊಡುವ ಸಿರಿಭೂಮಿದುರ್ಗೆ !
ಸರುವೋತ್ತಮ ನಮ್ಮ ವಿಜಯವಿಠಲನಂಘ್ರಿ
ಪರಮಭಕುತಿಯಿಂದ ಸ್ಮರಿಸುವ ಜಗಜ್ಜನನಿ ॥ 2 ॥

ತ್ರಿಪುಟತಾಳ

ಸ್ತುತಿ ಮಾಡುವೆ ನಿನ್ನ ಕಾಳಿ ಮಹಾ ಕಾಳಿ ಉ-
ನ್ನತಬಾಹು ಕರಾಳವದನೆ ಚಂದಿರಮುಖಿ
ಧೃತಿ ಶಾಂತಿ ಬಹುರೂಪೆ ರಾತ್ರಿ ರಾತ್ರಿಂಚರಣೆ
ಸ್ಥಿತಿಯೆ ನಿದ್ರಾ ಭದ್ರೆ ಭಕ್ತವತ್ಸಲಭಾವೆ
ಚತುರಷ್ಟದ್ವಹಸ್ತೆ ಹಸ್ತಿಗಮನೆ
ಧೃತಪ್ರಭಾವೆ ಪ್ರವಾಸೆ ದುರ್ಗಾರಣ್ಯವಾಸೆ
ಕ್ಷಿತಿಭಾರಹರಣೆ ಕ್ಷೀರಾಬ್ಧಿತನಯೆ ಸದ್-
ಗತಿಪ್ರದಾತೆ ಮಾಯೆ ಶ್ರಿಯೆ ಇಂದಿರೆ ರಮೆ
ದಿತಿಜಾತನಿಗ್ರಹೆ ನಿಧೂತಕಲ್ಮಷೆ
ಪ್ರತಿಕೂಲಭೇದೆ ಪೂರ್ಣಬೋಧೆ ರೌದ್ರೆ

ಅತಿಶಯರಕ್ತ ಜಿಹ್ವಾಲೋಲೆ ಮಾಣಿಕ್ಯಮಾಲೆ
ಜಿತಕಾಮೆ ಜನನಮರಣರಹಿತೆ ಖ್ಯಾತೆ
ಘೃತಪಾತ್ರ ಪರಮಾನ್ನ ತಾಂಬುಲಹಸ್ತೆ ಸು-
ವ್ರತೆ ಪತಿವ್ರತೆ ತ್ರಿನೇತ್ರೆ ರಕ್ತಾಂಬರೆ
ಶತಪತ್ರನಯನೇ ನಿರತಕನ್ಯೆ ಉದಯಾರ್ಕ
ಶತಕೋಟಿಸಂನಿಭೆ, ಹರಿ ಅಂಕಸಂಸ್ಥೆ
ಶ್ರುತಿತತಿನುತ ಶುಕ್ಲ ಶೋಣಿತರಹಿತೇ ಅ-
ಪ್ರತಿಹತೆ ಸರ್ವದಾ ಸಂಚಾರಿಣಿ ಚತುರೆ
ಚಾತುರೆ ಕಾಪರ್ದಿಯೆ ಅಂಭ್ರಣಿ ಹ್ರೀ
ಉತ್ಪತ್ತಿಸ್ಥಿತಿಲಯಕರ್ತೆ ಶುಭ್ರೆ ಶೋಭನಗಾತ್ರೆ
ಪತಿತಪಾವನೆ ಧನ್ಯೆ ಸರ್ವೌಷಧಿಯಲಿದ್ದು
ಹತ ಮಾಡು ಕಾಡುವ ರೋಗಂಗಳಿಂದ.
ಕ್ಷಿತಿಯೋಳ್ ಸುಖದಿಂದ ಬಾಳುವ ಮತಿಯಿತ್ತು
ಸತತ ಕಾಯಲಿಬೇಕು. ದುರ್ಗಾ ದುರ್ಗೆ,
ಚ್ಯುತದೂರ ವಿಜಯವಿಠಲರೇಯ ಪ್ರೀಯೆ
ಕೃತಾಂಜಲಿಯಿಂದ ತಲೆವಾಗಿ ನಮಿಸುವೆ ॥ 3 ॥
ಶ್ರೀಲಕ್ಷ್ಮೀ ಕಮಲಾ ಪದ್ಮಾ ಪದ್ಮಿನಿ ಕಮ-
ಲಾಲಯೆ ರಮಾ ವೃಷಾಕಪಿ ಧನ್ಯೆ ವೃದ್ಧಿ ವಿ
ಶಾಲೆ ಯಜ್ಞೆ ಇಂದಿರೆ ಹಿರಣ್ಯಾ ಹರಿಣಿ
ವಾಲಯ ಸತ್ಯಾ ನಿತ್ಯಾನಂದಿ, ತ್ರಾಹಿ ಸು-
ಶೀಲೆ, ಸುಗಂಧಸುಂದರಿ ವಿದ್ಯಾಶೀಲ
ಸುಲಕ್ಷಣಾ ದೇವಿ, ನಾನಾರೂಪಗಳಿಂದ ಮೆರೆವ ಮೃತ್ಯುನಾಶೆ
ವಾಲಗ ಕೊಡು ಸಂತರ ಸನ್ನಿಧಿಯಲ್ಲಿ
ಕಾಲಕಾಲಕೆ ಎನ್ನ ಭಾರವಹಿಸುವ ತಾಯಿ !
ಮೇಲುಮೇಲು ನಿನ್ನ ಕೀರ್ತಿ ಬಲು
ಕೇಳಿಕೇಳಿ ಬಮದೆ. ಕೇವಲ ಈ ಮನ
ಗಾಳಿಯಮತೆ ಪರದ್ರವ್ಯಕೆ ಪೋಪದು. ಏ-
ಳಾಲ ಮಾಡದೆ ಉದ್ಧಾರವ ಮಾಡು.
ಕೈಲಾಸಪುರದಲ್ಲಿ ಪುಜೆಗೊಂಬ ದೇವಿ,
ಮೂಲಪ್ರಕೃತಿ ಸರ್ವವರ್ಣಾಭಿಮಾನಿನಿ,
ಪಾಲಸಾಗರಶಾಯಿ ವಿಜಯವಿಠಲನೊಳು
ಲೀಲೆಯಾಡುವ ನಾನಾಭರಣಭೂಷಣೆ ಪುರ್ಣೆ ॥ 4 ॥

ಆದಿತಾಳ

ಗೋಪಿನಂದನೆ ಮತ್ತಾ ದೈತ್ಯಸಂತತಿಗೆ ಸಂ-
ತಾಪಕೊಡುತಿಪ್ಪ ಮಹಾಕಠೋರೆ ಉಗ್ರೆ
ರೂಪವೈಲಕ್ಷಣೆ ಅಜ್ಞಾನಕಭಿಮಾನಿ
ತಾಪತ್ರಯವಿನಾಶೆ ಓಂಕಾರೆ ಹೂಂಕಾರೆ
ಪಾಪಿ ಕಂಸಗೆ ಭಯ ತೋರಿದ ಬಾಲಲೀಲೆ
ವ್ಯಾಪುತೆ ಧರ್ಮಮಾರ್ಗಪ್ರೇರಣೆ ಅಪ್ರಾಕೃತೆ !
ಸ್ವಾಪದಲ್ಲಿ ನಿನ್ನ ನೆನೆಸಿದ ಶರಣರ್ಗೆ
ಅಪಾರವಾಗಿದ್ದ ವಾರಿಧಿಯಂತೆ ಮಹಾ
ಆಪತ್ತು ಬಂದಿರಲು ಹಾರಿ ಪೋಗೋದು. ಸಪ್ತ-
ದ್ವೀಪನಾಯಕೆ ನರಕನಿರ್ಲೇಪಿ ತಮೋಗುಣದ
ವ್ಯಾಪಾರ ಮಾಡಿಸಿ ಭಕ್ತಜನರ್ಗೆ ಪುಣ್ಯ
ಸೋಪಾನ ಮಾಡಿಕೊಡುವ ಸೌಭಾಗ್ಯವಂತೆ, ದುರ್ಗೀ,

ಪ್ರಾಪುತವಾಗಿ ಎನ್ನ ಮನದಲಿ ನಿಂದು ದುಃಖ-
ಕೂಪದಿಂದಲಿ ಎತ್ತಿ ಕಡೆಮಾಡು ಜನ್ಮಗಳ. ವಾಣಿ
ಸೌಪರ್ಣಿ ಮೊದಲಾದ ಸತಿಯರು ನಿತ್ಯ ನಿನ್ನ
ಆಪಾದಮೌಳಿತನಕ ಭಜಿಸಿ ಭವ್ಯ ರಾದರು.
ನಾ ಪೇಳುವದೇನು ? ಪಾಂಡವರ ಮನೋಭೀಷ್ಟೆ!
ಈ ಪಂಚ ಭೌತಿಕದಲ್ಲಿ ಆವ ಸಾಧನ ಕಾಣೆ.
ಶ್ರೀಪತಿನಾಮ ಒಂದೇ ಜಿಹ್ವಾಗ್ರದಲ್ಲಿ ನೆನೆವ
ಔಪಾಸನ ಕೋಡು, ರುದ್ರಾದಿಗಳ ವರದೆ.
ತಾಪಸಜನಪ್ರಿಯ ವಿಜಯವಿಠಲರೇಯನ
ಶ್ರೀಪಾದಾರ್ಚನೆ ಮಾಳ್ಪ ಶ್ರೀಭೂದುರ್ಗಾವರ್ಣತ್ರಯೆ ॥ 5 ॥
ದುರ್ಗೆ ಹಾ ಹೇ ಹಾ ಹಾ ದುರ್ಗೆ ಮಂಗಳದುರ್ಗೆ
ದುರ್ಗತಿ ಕೊಡದಿರು ವಿಜಯವಿಠಲಪ್ರಿಯೆ ॥

॥ ಶ್ರೀವಿಜಯದಾಸರಂತರ್ಗತ ಶ್ರೀಮಧ್ವಾಂತರ್ಗತ ಶ್ರೀಕೃಷ್ಣಾರ್ಪಣಮಸ್ತು॥